ಅಧ್ಯಕ್ಷರು:- ಶಿವಪ್ಪನವರೇ, ನಿಮ್ಮ ಚು.ಪ್ರ.47 (505) ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಕಳುಹಿಸಿದ್ದಾರೆ ಅದು ನಗರಾಭಿವೃದ್ಧಿ ಮಂತ್ರಿಗಳಿಗೆ ಹೋಗಿದೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಸಮಯ ತೆಗೆದುಕೊಂಡು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಪ್ರಶ್ನೆಗಳು ಬರುವ ದಿವಸ ಉತ್ತರ ಕೊಡಿಸುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನ ಒಂದು ಅರಿಕೆ ಎಂದರೆ, ನಾನು ಈ ಪ್ರಶ್ನೆಯನ್ನು ಮೇಲ್ಮನೆ ಸದಸ್ಯನಾಗಿದ್ದ ಕಾಲದಿಂದ ಅಂದರೆ ಸುಮಾರು 10 ವರ್ಷಗಳಿಂದ ಬೇರೆ ಬೇರೆ ರೀತಿಯಲ್ಲಿ, ಬೇರೆ ಬೇರೆ ರೂಪದಲ್ಲಿ ಕೇಳುತ್ತಿದ್ದೇನೆ. ಆ ಗ್ರಾಮಕ್ಕೆ ಕುಡಿಯುವ ನೀರನ್ನು ಕೊಡಬೇಕೆಂದು ಸರ್ಕಾರ ತೀರ್ಮಾನವನ್ನು ತೆಗೆದುಕೊಂಡು 8-10 ವರ್ಷಗಳಾದರೂ ಅದರ ಅಂದಾಜು ಪ್ರತಿವರ್ಷ ಹೆಚ್ಚುತ್ತಾ ಹೋಗುತ್ತಿದ್ದು ಇತ್ತೀಚೆಗೆ ಅದು ಬದಲಾವಣೆ ಆಗಿದೆ. ಮುಂದೆ ಇನ್ನೆಷ್ಟು ವರ್ಷವಾಗುತ್ತದೆಯೋ ಗೊತ್ತಿಲ್ಲ.

ಅಧ್ಯಕ್ಷರು:- ನೀವು ಮನಸ್ಸು ಮಾಡಿದರೆ ಸ್ವಂತ ಖರ್ಚಿನಲ್ಲೇ ಮಾಡಿಸಿಬಿಡಬಹುದು. ಸರ್ಕಾರಕ್ಕೆ ಏತಕ್ಕೆ ಕಾಯುತ್ತೀರಿ?

ಶ್ರೀ ಬಿ.ಬಿ.ಶಿವಪ್ಪ:- ತಾವು ಅಪ್ಪಣೆ ಕೊಟ್ಟರೆ ಅದನ್ನಾದರೂ ಮಾಡುತ್ತೇನೆ. ಸರ್ಕಾರ ಅದನ್ನು ಹೇಳಿದರೆ ಖಂಡಿತ ನಾನು ಮಾಡಿಸಿಬಿಡುತ್ತೇನೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಶಿವಪ್ಪನವರೇ, ಇದನ್ನು ನೀವು ಮಾಡಿಸಿ ಎಂದು ಸರ್ಕಾರ ಹೇಳಿದರೆ ನಾನು ಮಾಡಿಸಿಬಿಡುತ್ತೇನೆ.

ಶ್ರೀ ಸಿದ್ಧರಾಮಯ್ಯ:- ಸ್ವಂತ ಮಾಡಿಸಿಕೊಡುವುದಕ್ಕೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ಕೆರೆ ನೀರಿಗೆ ದೊಣ್ಣೆನಾಯಕನ ಅಪ್ಪಣೆಯೇ ಎನ್ನುವಂತೆ.

ಶ್ರೀ ಬಿ.ಬಿ.ಶಿವಪ್ಪ:- ಸದನದಲ್ಲಿ ನಾನು ಈ ಪ್ರಶ್ನೆಯನ್ನು ಕೇಳುತ್ತಿರುವುದರಿಂದ ತಾವು ಇಲ್ಲಿ ಉತ್ತರವನ್ನು ಹೇಳಬೇಕಾಗಿರುವುದರಿಂದ ಈ ಮಾತನ್ನು ಸದನದಲ್ಲಿ ತಾವು ಹೇಳಿದರೆ ನಾನು ಮಾಡಿಸುತ್ತೇನೆ.

ಅಧ್ಯಕ್ಷರು:- ಮುಂದೆ ನಗರಾಭಿವೃದ್ಧಿ ಮಂತ್ರಿಗಳಿಂದ ನಿಮಗೆ ಉತ್ತರವನ್ನು ತರಿಸಿಕೊಡುತ್ತೇನೆ.

ವಿಷಯ:- ಉಡುಪಿ ತಾಲ್ಲೂಕಿನ ಶಿರಿಯಾರ ಗ್ರಾಮದ ಸ್ಯಾಬ್ರಕಟ್ಟೆಯಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 48 (268)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಉಡುಪಿ ತಾಲ್ಲೂಕು ಶಿರಿಯಾರ ಗ್ರಾಮದ ಸ್ಯಾಬ್ರಕಟ್ಟೆಯಲ್ಲಿ ಪದವಿ ಪೂರ್ವ

ಕಾಲೇಜು ಪ್ರಾರಂಭಿಸಲು ಯೋಜನೆ ಸರ್ಕಾರದವರ ಮುಂದಿದೆಯೇ?

2. 15 ಕಿ.ಮೀ. ಪರಿಸರದಲ್ಲಿ ಯಾವುದೇ ಪದವಿಪೂರ್ವ ಕಾಲೇಜು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1. ಇಲ್ಲ.

2. ಇಲ್ಲ.

3. ಉದ್ಭವಿಸುವುದಿಲ್ಲ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ವರದಿ ರೀತಿಯಲ್ಲಿ ಕೊಟ್ಟಿದ್ದಾರೆ. ಇಲ್ಲ, ಇಲ್ಲ, ಉದ್ಭವಿಸುವುದಿಲ್ಲ ಎಂದು. ಬಹುಶಃ ಈ ಉತ್ತರವನ್ನು ಕೇಳುವುದಕ್ಕಾಗಿ ನಾವು ಇವರನ್ನು ಪ್ರಶ್ನೆ ಕೇಳಬೇಕಾಗಿಲ್ಲ. ತಮ್ಮ ಉತ್ತರ ಇದೇರೀತಿ ಬರುತ್ತದೆಂದು ಇತ್ತೀಚಿನ ದಿನಗಳಲ್ಲಿ ನಮಗೆ ಗೊತ್ತಾಗುತ್ತಿದೆ. ನಾನು ಏನು ಪ್ರಶ್ನೆಯನ್ನು ಕೇಳಿದ್ದೇನೆ, ಅದು ಆಗುತ್ತದೆಯೋ, ಇಲ್ಲವೊ? ಅದು ಆಗದಿದ್ದರೇ ಏತಕ್ಕೆ ಆಗುವುದಿಲ್ಲ ಎಂಬುದಕ್ಕಾದರೂ ಮಾಹಿತಿಗಳನ್ನು ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಮಾನ್ಯ ಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ. ಆದರೆ ಅವರ ಉತ್ತರ ಮಾತ್ರ ಸರಿಯಾಗಿಲ್ಲ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿದ್ದೇನೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನು ನೋವಿದೆ ಎಂಬುದು ನನಗೆ ಗೊತ್ತಿದೆ. ಅಲ್ಲಿ ಅವಶ್ಯಕತೆ ಇರುವುದರಿಂದ ಅಲ್ಲಿಗೆ ಪದವಿಪೂರ್ವ ಕಾಲೇಜನ್ನು ಕೊಡಿ ಎನ್ನವುದು ಅವರ ಅಭಿಪ್ರಾಯ. ಮಾನ್ಯ ಸದಸ್ಯರ ಪ್ರಶ್ನೆ ಯಾವರೀತಿ ಇದೆ ಎಂಬುದನ್ನು ಒಂದು ಸಾರಿ ಓದಿಬಿಡುತ್ತೇನೆ. 'ಉಡುಪಿ ತಾಲ್ಲೂಕು ಶಿರಿಯಾರ ಗ್ರಾಮದ ಸ್ಯಾಬ್ರಕಟ್ಟೆಯಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಯೋಜನೆ ಸರ್ಕಾರದ ಮುಂದಿದೆಯೇ?' ಎಂದು ಕೇಳಿರುವುದಕ್ಕೆ ''ಇಲ್ಲ'' ಎಂದು ಹೇಳಿದ್ದೇನೆ. ಅದೇ ರೀತಿ '15 ಕಿ.ಮೀ. ಪರಿಸರದಲ್ಲಿ ಯಾವುದೇ ಪದವಿಪೂರ್ವ ಕಾಲೇಜು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?' ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳಿದ್ದೇನೆ. ಇನ್ನು ಮೂರನೇದಾಗಿ ''ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?'' ಎಂದು ಕೇಳಿದ್ದಾರೆ ಅದು 'ಉದ್ಭವಿಸುವುದಿಲ್ಲ'' ಎಂದು ಹೇಳಿದ್ದೇನೆ. ತಮ್ಮ ಅನಿಸಿಕೆ ನನಗೆ ಗೊತ್ತಿದೆ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:- 15ಕಿ.ಮೀ. ಸುತ್ತಳತೆಯಲ್ಲಿ ಯಾವುದೇ ಪದವಿಪೂರ್ವ ಕಾಲೇಜು ಇಲ್ಲದೇ ಇರುವ ಸಂದರ್ಭದಲ್ಲಿ ಅಲ್ಲಿ ತೆರೆಯಬೇಕೆಂಬುದು ನಮ್ಮ

ಅಭಿಪ್ರಾಯ. ಎಲ್ಲಿ ಕಾಲೇಜು ಇರಬೇಕೆಂಬುದು ತಮಗೆ ಗೊತ್ತಿರುತ್ತದೆ. ನಾವು ತಮಗೆ ಮನವಿಯನ್ನು ಕೊಡುತ್ತೇವೆ. ಅದನ್ನು ತಾವು ಪರಿಗಣನೆಗೆ ತೆಗೆದುಕೊಳ್ಳದೇ ಇರಬಹುದು. ಆದರೆ ತಮ್ಮದೇ ಒಂದು ಆದ್ಯತೆ ಇರುತ್ತದೆ. ಅದು ಎಲ್ಲಿ ಆಗಬೇಕು, ಎಲ್ಲಿ ಆಗಬಾರದು ಎಂದು. ಅದನ್ನೂ ತಾವು ಯೋಚನೆ ಮಾಡದೆ, ನಮ್ಮ ಮನವಿಯನ್ನೂ ಪರಿಶೀಲನೆ ಮಾಡದೆ, ನಾವು ಕೊಟ್ಟಂಥ ಪ್ರಶ್ನೆಗೆ ''ಇಲ್ಲ'' ಎಂದ ಉತ್ತರವನ್ನು ಕೊಡುವುದಾದರೆ, ತಾವು ಯಾವ ನೀತಿಯ ಮೇಲೆ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೀರಿ? ಅದನ್ನಾದರೂ ಹೇಳಿ. ಬಹುಶಃ ನಮ್ಮ ಮನವಿಗೆ ಆದ್ಯತೆ ಕೊಡುವುದಿಲ್ಲ. ನಾವು ಕೊಟ್ಟಂಥ ಪ್ರಶ್ನೆಗಳಿಗೆ ತಾವು ಸರಿಯಾದ ಉತ್ತರವನ್ನೂ ಕಳುಹಿಸುವುದಿಲ್ಲ. ತಾವು ಯಾವ ಆದ್ಯತೆಯ ಮೇರೆಗೆ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸುತ್ತೇವೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಈ ವರ್ಷ ನಾವು ಒಂದೊಂದು ಜಿಲ್ಲೆಗೆ 2-2 ಪದವಿಪೂರ್ವ ಕಾಲೇಜುಗಳನ್ನು ಕೊಟ್ಟಿದ್ದೇವೆ. ದ.ಕ.ಜಿಲ್ಲೆಗೆ ಈಗಾಗಲೇ ನಾವು 2 ಪದವಿಪೂರ್ವ ಕಾಲೇಜುಗಳನ್ನು ಕೊಟ್ಟಿದ್ದೇವೆ. ಇದರ ಅವಶ್ಯಕತೆ ಇದೆಯೆಂದು ಮಾನ್ಯ ಸದಸ್ಯರು ಹೇಳುವುದರಲ್ಲಿ ವಿಶೇಷವೇನೂ ಇಲ್ಲ. ಇನ್ನೂ ಅನೇಕ ಕಡೆ ಕೊಡಬೇಕಾದ ಅವಶ್ಯಕತೆ ಇದ್ದರೂ ಕೂಡ, 2 ಕಡೆ ಕೊಟ್ಟಿದ್ದೀರಿ, ನಮಗೆ ಕೊಟ್ಟಿಲ್ಲವೆಂದು ಅವರು ಕೇಳುತ್ತಿರುವುದರಿಂದ ಅವರಿಗೆ ಈ ಪದವಿಪೂರ್ವ ಕಾಲೇಜಿನ ಅವಶ್ಯಕತೆ ಇದೆ ಮತ್ತು ನಾವು ಕೊಡಬೇಕಾದುದು ಧರ್ಮವೂ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ 2 ಕಾಲೇಜುಗಳನ್ನು ಕೊಟ್ಟಿರುವುದರಿಂದ ಇಲ್ಲಿಗೆ ಕೊಡುವುದಕ್ಕಾಗಿಲ್ಲ. ನಾವು ಈಗ ಮ್ಯಾಪಿಂಗ್ ಮಾಡಿಸುತ್ತಿದ್ದೇನೆ. ಇನ್ನು ಮುಂದೆ ನಾವು ಯಾವುದೇ ಪದವಿ ಪೂರ್ವ ಕಾಲೇಜನ್ನು ಕೊಡುವಾಗ ಎಷ್ಟು ಕಿ.ಮೀ. ದೂರದಲ್ಲಿ ಇರಬೇಕೆಂಬುದನ್ನು ನೋಡಿ, ಅದನ್ನು ಕೊಡುವಾಗ ಸಂಬಧಪಟ್ಟ ಶಾಸಕರಿಗೂ ಹೇಳಿ, ಇಂಥಹ ಕಡೆ ನಾವು ಕೊಡಬೇಕಾಗುತ್ತದೆ, ಉಳಿದ ಕಡೆಗಳಲ್ಲಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗಿ ಈಗ ನಾವು ಮ್ಯಾಪಿಂಗ್ ಮಾಡುತ್ತಿದ್ದೇವೆ. 15 ಕಿ.ಮೀ. ಸುತ್ತಳತೆಯಲ್ಲಿ ಯಾವುದೇ ಕಾಲೇಜು ಇಲ್ಲವೆಂದು ಏನು ಹೇಳಿದ್ದೀರಿ ಇದನ್ನೂ ಕೂಡ ಮ್ಯಾಪಿಂಗ್‌ನಲ್ಲಿ ಯಾವ ರೀತಿ ಬರುತ್ತದೆಂದು ನೋಡಿ ವ್ಯವಸ್ಥೆ ಮಾಡುತ್ತೇನೆ.

ವಿಷಯ:- ಸಂಜೆ 6ಗಂಟೆ ನಂತರ ಪೋಸ್ಟ್‌ಮಾರ್ಟಂ ಮಾಡಲು ಅನುಮತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 49 (199)

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅಪಘಾತಗಳಲ್ಲಿ ಸತ್ತುಹೋದ ಮನುಷ್ಯರ ಹೆಣಗಳನ್ನು ಸಂಜೆ 6ಘಂಟೆಯ ನಂತರ ಪೋಸ್ಟ್ ಮಾರ್ಟಂ ಮಾಡುವುದು ಕಾನೂನು ವಿರುದ್ಧವೆ?